# ಅಮೀರ್ ಖಾನ್‌ಗೆ ಸೇತುಪತಿ ಸಾಥ್



ಅಮೀರ್ ಖಾನ್ ನಟಿಸುತ್ತಿರುವ 'ಲಾಲ್ ಸಿಂಗ್ ಛಡ್ಡಾ' ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿದೆ. ಈ ಚಿತ್ರಕ್ಕಾಗಿ ಅಮೀರ್ ಖಾನ್ 21 ಕೆ.ಜಿ. ತೂಕ ಇಳಿಸಿಕೊಂಡಿದ್ದು, ಎರಡು ವಿಭಿನ್ನ ಲುಕ್‌ಗಳಲ್ಲಿ ಅವರು ಕಾಣಿಸಿಕೊಳ್ಳುತ್ತಿರುವುದು ಹೀಗೆ ಅಭಿಮಾನಿಗಳ ಕುತೂಹಲ ಕೆರಳಿಸಲು ಹೊಸ ಹೊಸ ಸುದ್ದಿಗಳನ್ನು ಕೊಡುತ್ತಲೇ ಇದೆ ಚಿತ್ರತಂಡ. ಈಗ ಚಿತ್ರತಂಡದಿಂದ ಇನ್ನೊಂದು ಬ್ರೇಕಿಂಗ್ ನ್ಯೂಸ್ ಹೊರಬಿದ್ದಿದೆ. 'ಲಾಲ್ ಸಿಂಗ್ ಛಡ್ಡಾ' ಸಿನಿಮಾದಲ್ಲಿ ದಕ್ಷಿಣ ಭಾರತದ ಜನಪ್ರಿಯ ನಟರೊಬ್ಬರು ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ ಎಂಬುದೇ ಆ ಸುದ್ದಿ. ಹಾಗಾದರೆ ಯಾರವರು?

ನಟನೆಯ ಮೂಲಕವೇ ಬಾಲಿವುಡ್‌ನಲ್ಲಿ ಗಟ್ಟಿಯಾದ ಸ್ಥಾನ ಗಿಟ್ಟಿಸಿಕೊಂಡಿರುವ ಅಮೀರ್ ಖಾನ್‌ಗೆ ಅಂಥದ್ದೇ ಮಾದರಿಯ ಇನ್ನೊಬ್ಬ ನಟ ಕೈ ಜೋಡಿಸಲಿದ್ದಾರೆ. ಅವರು ಬೇರಾರೂ ಅಲ್ಲ, ತಮಿಳಿನ ವಿಜಯ್ ಸೇತುಪತಿ! ಹೌದು, ವಿಜಯ ಸೇತುಪತಿ, ಲಾಲ್ ಸಿಂಗ್ ಛಡ್ಡಾ ಸಿನಿಮಾದಲ್ಲಿ ವಿಶೇಷ ಪಾತ್ರವೊಂದರಲ್ಲಿ ನಟಿಸಲಿದ್ದಾರೆ. ಜೂನ್ ತಿಂಗಳಲ್ಲಿ ಅವರು ಚಿತ್ರತಂಡದ ಜೊತೆಯಲ್ಲಿ ಸೇರಿಕೊಳ್ಳಲಿದ್ದು, ಚಿತ್ರೀಕರಣದಲ್ಲಿ ಪಾಲ್ಗೊಳ್ಳಲಿದ್ದಾರೆ. ವಿಜಯ್ ಯಾವುದೇ ಸಿನಿಮಾದಲ್ಲಿ ನಟಿಸುವುದಾದರೂ ಆ ಪಾತ್ರಕ್ಕೆ ನ್ಯಾಯ ಒದಗಿಸಿಕೊಡಲು ಸಕಲ ಶ್ರಮ ವಹಿಸುತ್ತಾರೆ. ನಟನೆಯ ಬಗ್ಗೆ ಅವರಿಗಿರುವ ಬದ್ಧತೆಯ ಬಗ್ಗೆ ಎರಡು ಮಾತಿಲ್ಲ. ಈ ಸಿನಿಮಾದಲ್ಲಿ ಅತಿಥಿ ಪಾತ್ರವಾಗಿದ್ದರೂ ಆ ಪಾತ್ರಕ್ಕೆ ತಕ್ಕಂತೆ ತಮ್ಮ ದೇಹವನ್ನು ಒಗ್ಗಿಸಿಕೊಳ್ಳಲು ಅವರು ತೂಕ ಕಳೆದುಕೊಳ್ಳಲು ಮುಂದಾಗಿದ್ದಾರೆ. ಒಂದು ಮೂಲದ ಪ್ರಕಾರ ವಿಜಯ್ ಈ ಚಿತ್ರಕ್ಕಾಗಿ 25 ಕೆ.ಜಿ. ತೂಕ ಕಡಿಮೆ ಮಾಡಿಕೊಳ್ಳಲಿದ್ದಾರಂತೆ! ಅಂದರೆ ಈ ವಿಷಯದಲ್ಲಿಯೂ ಅಮೀರ್‌ಗಿಂತ ಇನ್ನೊಂದು ಹೆಜ್ಜೆ ಮುಂದೆ ಇಡಲಿದ್ದಾರೆ.

ಹಾಗಾದರೆ ಚಿತ್ರದಲ್ಲಿ ವಿಜಯ್ ಪಾತ್ರ ಎಂಥದ್ದು? ಅಮೀರ್ ಖಾನ್‌ರ ಜೊತೆ ಕೆಲಸ ಮಾಡುವ ಸೈನಿಕನ ಪಾತ್ರದಲ್ಲಿ ಅವರು ನಟಿಸಲಿದ್ದಾರೆ. ಸೈನಿಕ ಅಂದಾಕ್ಷಣ ಅದಕ್ಕೆ ತಕ್ಕ ಹಾಗೆ ಮೈಕಟ್ಟು ಹುರಿಗೊಳಿಸಿಕೊಳ್ಳಬೇಕಲ್ಲವೇ? ಅದಕ್ಕಾಗಿಯೇ ತೂಕ ಕಳೆದುಕೊಳ್ಳುವ ಕಸರತ್ತಿಗೆ ಅವರು ತೊಡಗಿದ್ದು. ವಿಜಯ್ ತಮ್ಮ ಸಿದ್ಧತೆಯೊಟ್ಟಿಗೆ ಅಮೀರ್ ಮತ್ತು ನಿರ್ದೇಶಕ ಅದ್ವೈತ್ ಚಂದನ್ ಜೊತೆ ನಿರಂತರ ಸಂಪರ್ಕದಲ್ಲಿದ್ದು ಪಾತ್ರದ ಬಗ್ಗೆ ಚರ್ಚೆ ಮಾಡುತ್ತಿದ್ದಾರಂತೆ.

ಕರೀನಾ ಕಪೂರ್ ಕೂಡ ನಟಿಸಿರುವ 'ಲಾಲ್ ಸಿಂಗ್ ಛಡ್ಡಾ' ಇದೇ ವರ್ಷದ ಕ್ರಿಸ್‌ಮಸ್‌ಗೆ ತೆರೆಯ ಮೇಲೆ ಬರಲಿದೆ. ■

# ರಾಧಿಕಾ ಪುಳಕ



ಇರ್ಫಾನ್ ಖಾನ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ 'ಅಂಗ್ರೇಜಿ ಮೀಡಿಯಂ' ಸಿನಿಮಾ ಟ್ರೇಲರ್ ಸಾಕಷ್ಟು ಸದ್ದು ಮಾಡುತ್ತಿದೆ. ಪ್ರೇಕ್ಷಕರಿಗೆ ಮೆಚ್ಚುಗೆಯಾಗಿರುವುದು ಒಂದು ಕಡೆಗಾದರೆ ಚಿತ್ರದಲ್ಲಿ ನಟಿಸಿದ ಕಲಾವಿದರಲ್ಲಿಯೂ ಅದು ಪುಳಕ ಹುಟ್ಟಿಸಿದೆ.

ರಾಧಿಕಾ ಮದನ್ ಕೂಡ 'ಅಂಗ್ರೇಜಿ ಮೀಡಿಯಂ' ಸಿನಿಮಾದಲ್ಲಿ ಮುಖ್ಯಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರದ ಟ್ರೈಲರ್ ನೋಡಿ ಅವರ ಹೃದಯ ಕರಗಿ ಅತ್ತುಬಿಟ್ಟಿದ್ದಾರಂತೆ. ಈ ಕುರಿತು ಸಂದರ್ಶನವೊಂದರಲ್ಲಿ ಅವರು ಹೇಳಿಕೊಂಡಿದ್ದಾರೆ. 'ಸಿನಿಮಾದ ಟ್ರೈಲರ್ ನೋಡಿದೆ... ಕೊನೆಯ ಆ ಹತ್ತು ಸೆಕೆಂಡ್‌ಗಳು... ನನಗೆ ಎಲ್ಲರೂ ಮರೆತುಹೋಯಿತು... ಕಣ್ಣುಗಳಲ್ಲಿ ನೀರುಕ್ಕಿತು. ಜೋರಾಗಿ ಅತ್ತುಬಿಟ್ಟೆ. ಅದು ನನ್ನ ಕನಸು. ನನ್ನ ಕನಸನ್ನು ನಾನು ಜೀವಿಸುತ್ತಿದ್ದೆ. ಅದಕ್ಕಿಂತ ಸುಂದರವಾದ ಭಾವನೆ ಈ ಜಗತ್ತಿನಲ್ಲಿ ಇರಲು ಸಾಧ್ಯವೇ? ನಾನು ಎಷ್ಟೋ ದಿನಗಳಿಂದ ಕಾಣುತ್ತಿದ್ದ, ಕಾಯುತ್ತಿದ್ದ ಕನಸೊಂದು ಈ ಚಿತ್ರದಲ್ಲಿ ನನಸಾಗಿದೆ' ಎಂದು ಅವರು ಭಾವುಕರಾಗಿ ಹೇಳಿದ್ದಾರೆ.

ರಾಧಿಕಾ ಕಿರುತೆರೆ ಧಾರಾವಾಹಿಯ ಮೂಲಕ ಬಣ್ಣದ ಲೋಕ ಪ್ರವೇಶಿಸಿದವರು. 'ಮೇರಿ ಆಶಿಕಿ ತುಮ್ಸೆ ಹಿ' ಎಂಬ ಧಾರಾವಾಹಿಯಲ್ಲಿ ನಟಿಸುತ್ತಿದ್ದ ಅವರು ವಿಶಾಲ್ ಭಾರದ್ವಾಜ್ ಕಣ್ಣಿಗೆ ಬಿದ್ದರು. ಅವರಲ್ಲಿನ ನಟನಾಪ್ರತಿಭೆಯನ್ನು ಗುರ್ತಿಸಿದ ವಿಶಾಲ್, 'ಪಟಾಕಾ' ಚಿತ್ರದಲ್ಲಿ ನಟಿಸಲು ಅವಕಾಶ ಕೊಟ್ಟರು. ಈ ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ದೊಡ್ಡ ಯಶಸ್ಸು ಕಾಣದಿದ್ದರೂ ರಾಧಿಕಾ ಅವರ ನಟನೆಯನ್ನು ಇನ್ನಷ್ಟು ಜನರು ಗುರ್ತಿಸಲು ಅವಕಾಶವನ್ನಂತೂ ಮಾಡಿಕೊಟ್ಟಿತು. ನಂತರ 'ಮರ್ದ್ ಕೋ ದರ್ದ್ ನಹಿ ಹೋತಾ' ಚಿತ್ರದಲ್ಲಿ ಅಭಿಮನ್ಯು ದಸ್ಸಾನಿ ಜೊತೆ ತೆರೆ ಹಂಚಿಕೊಂಡರು. ಆ ಚಿತ್ರವೂ ಸದ್ದು ಮಾಡಿದ್ದು ಅಷ್ಟಕ್ಕಷ್ಟೆ. ಈಗ ಬಿಡುಗಡೆಗೆ ಸಜ್ಜಾಗಿರುವ 'ಅಂಗ್ರೇಜಿ ಮೀಡಿಯಂ' ಸಿನಿಮಾದ ಬಗ್ಗೆ ರಾಧಿಕಾಗೆ ಸಾಕಷ್ಟು ನಿರೀಕ್ಷೆಗಳಿವೆ. 'ಅಂಗ್ರೇಜಿ ಮೀಡಿಯಂ' ಸಿನಿಮಾ ಇನ್ನಷ್ಟು ಹಿಂದಿ ಸಿನಿಮಾಗಳಲ್ಲಿ ನಟಿಸುವ ಅವಕಾಶ ದೊರಕಿಸಿಕೊಡುತ್ತದೆ ಎಂಬ ಆಶಾಭಾವದಲ್ಲಿ ಅವರು ಕಾಯುತ್ತಿದ್ದಾರೆ.

■ ಮಾಂಟೊ